# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾ ಪಟುಗಳು ಹಾಗೂ ಕುಸ್ತಿದಾರರಿಗೆ ಮಾಶಾಸನ ಪಾವತಿಗಾಗಿ ಪುನರ್ ವಿನಿಯೋಗದ ಮೂಲಕ ಒದಗಿಸಿರುವ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಆಇ 114 ಬಿಆರ್.ಎಸ್ 2021 ದಿನಾಂಕ:29.10.2021
2. ಆರ್ಥಿಕ ಇಲಾಖೆ ವೆಚ್ಚ 7 ಶಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 438 ವೆಚ್ಚ 7/2021 ದಿನಾಂಕ:2.11.2021

**ಪ್ರಸ್ತಾವನೆ:**

ವಿವಿಧ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಮಾಶಾಸನ ಪಾವತಿಗಾಗಿ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2205–00–104–0–29–090ರಡಿ ಬಿಡುಗಡೆಗೊಳಿಸಲು ಲಭ್ಯವಿರುವ 4ನೇ ತ್ರೈಮಾಸಿಕ ಕಂತಿನ ಅನುದಾನದಿಂದ ಮರುಹೊಂದಾಣಿಕೆಗೊಳಿಸಿ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2205–00–104–0–30–100ಕ್ಕೆ ಮರು ಹೊಂದಾಣಿಕೆಯ ಮೂಲಕ ರೂ.218.00ಲಕ್ಷಗಳನ್ನು ಮೇಲೆ (1)ರಲ್ಲಿ ಓದಲಾದ ಆದೇಶದ ಮೂಲಕ ಒದಗಿಸಲಾಗಿದೆ.

ಪುನರ್ ವಿನಿಯೋಗದ ಮೂಲಕ ಒದಗಿಸಿರುವ ಹೆಚ್ಚುವರಿ ಅನುದಾನವನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಗೊಳಿಸುವಂತೆ ಮೇಲೆ (2)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಪ್ರಸ್ತಾವಿಸಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ರೂ.218.00ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2204–00–196–1–01ರಡಿ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 524 ವೆಚ್ಚ 6/2021(ಇ) ದಿನಾಂಕ: 8ನೇ ನವಂಬರ್ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 2ರ ಜಿಲ್ಲಾ ಪಂಚಾಯತಿಗಳಿಗೆ ಕಾಲಂ 4 ಕಾರ್ಯಕ್ರಮದಡಿ ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಮಾಶಆಸನ ಪಾವತಿಗಾಗಿ ಅಗತ್ಯವಿರುವ ಅನುದಾನವನ್ನು ಕಾಲಂ 5ರ ಲೆಕ್ಕ ಶೀರ್ಷಿಕೆಯಡಿ ರೂ218.00ಲಕ್ಷ (ರೂಪಾಯಿ ಎರಡು ನೂರ ಹದಿನೆಂಟು ಲಕ್ಷಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ.

ಬಿಡುಗಡೆಗೊಳಿಸಿದ ಈ ಅನುದಾನವನ್ನು ಪ್ರಸ್ತಾವಿತ ವೆಚ್ಚವನ್ನು ಆದ್ಯತೆಯ ಮೇಲೆ ವೆಚ್ಚ ಮಾಡತಕ್ಕದ್ದು, ಯಾವುದೇ ಹಂತದಲ್ಲಿ ಅಂದರೆ ಮುಖ್ಯ ಲೆಕ್ಕಾಧಿಕಾರಿಳು/ಅನುಷ್ಠಾನಾಧಿಕಾರಿಗಳ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು

| ಕ್ರ.ಸಂ. | ಜಿಲ್ಲಾ ಪಂಚಾಯತ್ | ಜಿಲ್ಲಾ ಕೋಡ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ಲೆಕ್ಕ ಶೀರ್ಷಿಕೆ 2204-00-196-1-01ರಡಿ ಬಿಡುಗಡೆಗೊಳಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | ಬೆಂಗಳೂರು(ನಗರ) | 401 | 2205-00-104-0-30-100 | 2.00 |
| 2 | ಬೆಂಗಳೂರು (ಗ್ರಾ) | 402 | 2205-00-104-0-30-100 | 1.00 |
| 3 | ಕೋಲಾರ | 404 | 2205-00-104-0-30-100 | 1.50 |
| 4 | ಶಿವಮೊಗ್ಗ | 405 | 2205-00-104-0-30-100 | 16.00 |
| 5 | ತುಮಕೂರು | 406 | 2205-00-104-0-30-100 | 0.50 |
| 6 | ಮೈಸೂರು | 407 | 2205-00-104-0-30-100 | 2.00 |
| 7 | ಚಿಕ್ಕಮಗಳೂರು | 408 | 2205-00-104-0-30-100 | 4.00 |
| 8 | ಹಾಸನ | 410 | 2205-00-104-0-30-100 | 4.00 |
| 9 | ಮಂಡ್ಯ | 412 | 2205-00-104-0-30-100 | 1.00 |
| 10 | ಬೆಳಗಾವಿ | 413 | 2205-00-104-0-30-100 | 29.00 |
| 11 | ವಿಜಯಪುರ | 414 | 2205-00-104-0-30-100 | 14.00 |
| 12 | ಧಾರವಾಡ | 415 | 2205-00-104-0-30-100 | 84.00 |
| 13 | ಉತ್ತರ ಕನ್ನಡ | 416 | 2205-00-104-0-30-100 | 7.00 |
| 14 | ಕಲಬುರಗಿ | 417 | 2205-00-104-0-30-100 | 8.00 |
| 15 | ದಾವಣಗೆರೆ | 451 | 2205-00-104-0-30-100 | 3.00 |
| 16 | ಚಾಮರಾಜನಗರ | 456 | 2205-00-104-0-30-100 | 1.50 |
| 17 | ಬಾಗಲಕೋಟೆ | 461 | 2205-00-104-0-30-100 | 21.00 |
| 18 | ಗದಗ್ | 462 | 2205-00-104-0-30-100 | 14.00 |
| 19 | ಹಾವೇರಿ | 463 | 2205-00-104-0-30-100 | 4.00 |
| 20 | ಕೊಪ್ಪಳ | 466 | 2205-00-104-0-30-100 | 0.50 |
| | ಒಟ್ಟು | | | **218.00** |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಶ್ರೀಕೃಷ್ಣ ಎನ್. ಬುಗಟ್ಯಾಗೋಳ)

ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು-2ರವರಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ
4. ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
5. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು,
7. ರಕ್ಷಾ ಕಡತಕ್ಕೆ
8. ಹೆಚ್ಚುವರಿ ಪ್ರತಿ